ಇಲ್ಲಾ, ನೀವು ಬಿಜೆಪಿಯವರೊಂದಿಗೆ ಸೇರಿ ಮಾಡುತ್ತಿದ್ದೀರಾ? ಇವತ್ತು ಪತ್ರಿಕೆಯ ಮುಖಪುಟದಲ್ಲಿ ಬಂದಿದೆ.

ಶ್ರೀ ಕೆ.ಎಸ್.ಈಶ್ವರಪ್ಪ: ಅವರು, ಇವರು, ಸರ್ಕಾರ ನಡೆಸುತ್ತಾರೆಂದು ಇವರು ಹೇಳಬೇಕು. ನಮಗೆ ಏಕೆ?

ಅಧ್ಯಕ್ಷರು: ಪತ್ರಿಕೆಯವರು ಅವರ ಕೆಲಸ ಅವರು ಮಾಡುತ್ತಾರೆ. ಅದಕ್ಕೆಲ್ಲಾ ಉತ್ತರವನ್ನು ಕೊಡುವುದಕ್ಕಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್: ಇದರ ಬಗ್ಗೆ ಸರ್ಕಾರದವರು ಉತ್ತರವನ್ನು ಕೊಡುವುದಿಲ್ಲವೇ?

ಶ್ರೀ ಬಿ.ಎನ್.ಬಚ್ಚೇಗೌಡ: ತಾವು, ಸರ್ಕಾರ ಇನ್ನೂ 5 ವರ್ಷ ಇರಲಿ ಎಂದು ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್: ಅದರ ಬಗ್ಗೆ ಎರಡು ಅಭಿಪ್ರಾಯವಿಲ್ಲ. ಇವತ್ತು ಬಂದಿರತಕ್ಕಂಥದ್ದು ಸಂಬಂಧಪಟ್ಟ ಸಚಿವರು ಚುರುಕಾಗಿರಲಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರದ ಉತ್ತರ ಇಲ್ಲವೇ?

ಶ್ರೀ ಡಿ.ಮಂಜುನಾಥ್: ಮಾನ್ಯ ರಾಮಸ್ವಾಮಿಯವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ರಾಮಸ್ವಾಮಿಯವರು ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆಯೇ? ತಾವು ಹಿರಿಯ ಸಚಿವರು ಮೊನ್ನೆ ತಾನೇ ನೀವು ಪ್ರಮಾಣ ವಚನ ಸ್ವೀಕಾರ ಮಾಡಿದ್ದೀರಿ. ನಾಳೆ ಬೆಳಿಗ್ಗೆ ನಿಮ್ಮ ಸರ್ಕಾರ ಹೋಗುವುದಾದರೆ ಇದರಿಂದ ನನಗೆ ತೀವ್ರವಾದ ನೋವಾಗುತ್ತದೆ.

ಶ್ರೀ ಡಿ.ಮಂಜುನಾಥ್: ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಗೆ ಹೋಗಿದ್ದಾರೆ.

ಇ) ನಾರಾಯಣಪುರ ತೋಟಗಾರಿಕಾ ಕ್ಷೇತ್ರದಲ್ಲಿ ಆಗಿದೆ ಎನ್ನಲಾದ ಅವ್ಯವಹಾರದ ಬಗ್ಗೆ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಸನ್ಮಾನ್ಯ ಅಧ್ಯಕ್ಷರೆ, ಈ ನಾರಾಯಣಪುರ ತೋಟಗಾರಿಕಾ ಕ್ಷೇತ್ರದಲ್ಲಿ ಸರ್ಕಾರದ 5 ಕೋಟಿ ರೂಪಾಯಿ ಅಕ್ರಮವಾಗಿ ದುರುಪಯೋಗವಾಗಿದೆ. ಇದರ ಹಿಂದೆ ಒಂದು ದೊಡ್ಡ ಜಾಲ ಇದೆ. ಇದೊಂದು ದೊಡ್ಡ ಹಗರಣ. ನಿನ್ನೆ ತಾವು ಸಿಎಜಿ ವರದಿಯನ್ನು ಸದನದಲ್ಲಿ ಮಂಡಿಸಿದ್ದೀರಿ. ಅದರ ವರದಿಯನ್ನು ಎರಡು ವಾಕ್ಯಗಳಲ್ಲಿ ನಾನು ಓದುತ್ತೇನೆ. "Government funds to a tune of Rs.5 crore was fraudulently withdrawn

at the Sub Treasury, Hunasagi, by the Assistant Director of Horticulture Farm, Narayanapura." Another observation is : "In the light of these serious financial irregularities amounting to Rs.1,09,91,600, if action had been initiated against the Officers, further defalcations/ fraudulent withdrawals could have been averted."

11.30 ಎ.ಎಂ

ಸನ್ಮಾನ್ಯ ಅಧ್ಯಕ್ಷರೆ, ನಾರಾಯಣಪುರ ತೋಟಗಾರಿಕೆ ಕ್ಷೇತ್ರದಲ್ಲಿ ಒಬ್ಬ ಹಾರ್ಟಿಕಲ್ಚರ್ ಅಸಿಸ್ಟೆಂಟ್ ಇದ್ದ. ಆ ಹಾರ್ಟಿಕಲ್ಚರ್ ಅಸಿಸ್ಟೆಂಟ್ ಅನ್ನು ಇನ್‌ಚಾರ್ಜ್ ಎ.ಹೆಚ್.ಒ ಆಗಿ ಮಾಡಿದರು. ಇನ್‌ಚಾರ್ಜ್ ಎ.ಹೆಚ್.ಒ. ಆದಮೇಲೆ ಅಸಿಸ್ಟೆಂಟ್ ಡೈರೆಕ್ಟರ ಆಫ್ ಹಾರ್ಟಿಕಲ್ಚರ್ ಅನ್ನು ಬೇರೆ ಕಡೆ ವರ್ಗ ಮಾಡಿ ಆ ಇನ್‌ಚಾರ್ಜ್ ಎ.ಹೆಚ್.ಒ. ಪ್ರಭಾರಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್ ಆದ. ಏತಕ್ಕೆಂದರೆ ಡ್ರಾಯಿಂಗ್ ಪವರ್ ಬರುತ್ತದೆ ಎಂದು.

MR. SPEAKER: What is the amount involved?

ಶ್ರೀ ಎ.ಟಿ.ರಾಮಸ್ವಾಮಿ: ಐದು ಕೋಟಿ ರೂಪಾಯಿಗಳು.

ಅಧ್ಯಕ್ಷರು: ಐದು ಕೋಟಿ ರೂಪಾಯಿಗಳು ಎಂದು ಹೇಳುವುದಕ್ಕೆ ಅಥಾರಿಟಿ ಏನು?

ಶ್ರೀ ಎ.ಟಿ.ರಾಮಸ್ವಾಮಿ: ಈಗತಾನೇ ಸಿ.ಎ.ಜಿ ರಿಪೋರ್ಟ್ ಓದಿದೆ. ಅದೇ ಆಧಾರ.

MR. SPEAKER: Since it is a very serious matter, let us not take it in Zero Hour. I will get the matter listed for half an hour discussion. I will also ask the Hon.Minister to be present.

ಶ್ರೀ ಡಿ.ಮಂಜುನಾಥ್: ಈಗ ತೋಟಗಾರಿಕೆ ಇಲಾಖೆಯ ಬೇಡಿಕೆಗಳು ಚರ್ಚೆಗೆ ಬರುತ್ತಿವೆ. ಆಗ ವಿಷದವಾಗಿ ಇದರ ಬಗ್ಗೆ ಹೇಳಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ತಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಈಶ್ವರಪ್ಪನವರದ್ದು ಆದ ಕೂಡಲೇ ತೆಗೆದುಕೊಳ್ಳಿ. ಈಗ ಅರ್ಧ ಪ್ರಸ್ತಾಪ ಮಾಡಿದರೆ ಚೆನ್ನಾಗಿರುವುದಿಲ್ಲ.

ಅಧ್ಯಕ್ಷರು: ನಾನು ಒಪ್ಪಿದ್ದೇನೆ; ಇವತ್ತೇ ಆದರೆ ತೆಗೆದುಕೊಳ್ಳೋಣ. ಒಂದು ವೇಳೆ ಸಮಯಾವಕಾಶ ಆಗದಿದ್ದರೆ ನಾಳೆ ತೆಗೆದುಕೊಳ್ಳೋಣ. ನಾನೇ ವಾಲಂಟರಿಯಾಗಿ ಹೇಳಿದ್ದೇನೆ; Because it is a very serious matter. I have also asked him the basis.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಇದರಲ್ಲಿ ಅವರು ಒಬ್ಬರೇ ಮಾತನಾಡುವವರು. ಆದ್ದರಿಂದ ಕೂಡಲೇ ತೆಗೆದುಕೊಳ್ಳಿ ಎಂಬುದು ನಮ್ಮ ಮನವಿ.

ಅಧ್ಯಕ್ಷರು: ಇದು ಬಹಳ ಮಹತ್ವದ ವಿಚಾರ ಎಂದು ಹೇಳಿ ನಾನೇ ಸ್ವಯಂ ಪ್ರೇರಿತನಾಗಿ ಒಪ್ಪಿಕೊಂಡಿದ್ದೇನೆ. ಕೂಡಲೇ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಈ) ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ದಕ್ಷಿಣ ಕನ್ನಡ ಜಿಲ್ಲೆ ಎಂದು ಹೆಸರಿಡುವ ಬಗ್ಗೆ.

ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಎರಡು ಜಿಲ್ಲೆಗಳಾಗಿ ವಿಂಗಡಿಸಲ್ಪಟ್ಟಿದೆ. ಅದು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆ ಎಂದು. ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಎಂದು ಯಾವ ಒಂದು ಭಾವನಾತ್ಮಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕವಾದ ಭಾವನೆಗಳಿವೆ, ಆ ಒಂದು ಪರಂಪರೆಯ ಕೊಂಡಿ ಇದೆ ಅದು ಸ್ವಲ್ಪ ಕಳಚಿ ಹೋಗುತ್ತದೆ. ಅದಕ್ಕೆ ಜಿಲ್ಲಾ ಪಂಚಾಯಿತಿ ಒಂದು ಅವಿಭಾಜ್ಯ ಅಂಗವಾಗಿ, ಜಿಲ್ಲಾ ಪಂಚಾಯಿತಿ ಸರ್ವಾನುಮತದಿಂದ ಏನು ಒಂದು ನಿರ್ಣಯ ಮಾಡಿದೆ ಎಂದರೆ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ದಕ್ಷಿಣ ಕನ್ನಡ ಜಿಲ್ಲೆ ಎಂದು ವಿಂಗಡಿಸಲಾಗಿದೆ. ಎಲ್ಲಾ ಪಕ್ಷದವರು ಅವಿಭಾಜ್ಯವಾಗಿ ಈ ರೀತಿ ನಿರ್ಣಯ ಮಾಡಿದ್ದಾರೆ. ಈ ಬೇಡಿಕೆ ಸಾರ್ವತ್ರಿಕವಾಗಿ ಇವತ್ತು ಬರುತ್ತಿದೆ. ಆದುದರಿಂದ ಭಾವನಾತ್ಮಕವಾಗಿ ಆ ಜಿಲ್ಲೆಯ ವಿಂಗಡಣೆ ಆಡಳಿತದ ದೃಷ್ಟಿಯಿಂದ ಚಿಕ್ಕ ಜಿಲ್ಲೆ ಆಗಬೇಕೆಂದು ಹೇಳುವುದು ಸೂಕ್ತವಾಗಿದೆ. ಆದರೆ ಹೆಸರಿಸುವಾಗ ಮಾತ್ರ ಅದು ಉಡುಪಿ ಜಿಲ್ಲೆ ಅಥವಾ ದಕ್ಷಿಣ ಕನ್ನಡ ಜಿಲ್ಲೆ ಎಂದು ಮಾರ್ಪಡಿಸಿದರೆ ಭಾವನಾತ್ಮಕವಾದ ಆಘಾತ ಆ ಜಿಲ್ಲೆಯವರಿಗೆ ಆಗುತ್ತದೆ. ಆ ಕಾರಣದಿಂದ ದಯಮಾಡಿ, ಮಾನ್ಯ ಕಂದಾಯ ಮಂತ್ರಿಗಳು ಆ ಪ್ರದೇಶದಲ್ಲಿರತಕ್ಕ ಜನರ ಭಾವನೆಗಳು ಏನಿವೆ ಅವನ್ನು ಗ್ರಹಿಸಿ ಅದಕ್ಕೆ ಸ್ಪಂದಿಸಿ ಈ ಜಿಲ್ಲೆಗಳನ್ನು ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ದಕ್ಷಿಣ ಕನ್ನಡ ಜಿಲ್ಲೆ ಎಂದು ಹೆಸರಿಸತಕ್ಕ ಕೆಲಸವನ್ನು ತಕ್ಷಣ ಮಾಡಬೇಕು. ಏಕೆಂದರೆ ಜಿಲ್ಲಾಪಂಚಾಯಿತಿ, ಉಡುಪಿ ಕಳೆದ ವಾರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಸಿದೆ. ಸಧ್ಯದಲ್ಲೇ ಮತ್ತೆ ಚುನಾವಣೆ ಆಗುತ್ತಿದೆ. ಆದ್ದರಿಂದ ತಕ್ಷಣ ತಾವು ಹೆಸರಿಸದೆ ಇದ್ದರೆ ಇದಕ್ಕೆ ಬೇರೆ ತಾಂತ್ರಿಕ ತೊಂದರೆಗಳು ಬರುವ ಕಾರಣ ಈ ಬಗ್ಗೆ ತಕ್ಷಣ ಕಾರ್ಯಕ್ರಮ